ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯು ದಿನಾಂಕಃ 09-**08**-**2017**ರಂದು
ನಡೆಸಲಾದ ಸಭೆಯ ನಡವಳಿಗಳು

ವಿಷಯ ಸಂಖ್ಯೆಃ ಬೃ.ಸಾ.ಕಾ.ಸ್ಥಾ.ಸ:/12/2017-18

ವಿಶೇಷ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, Construction of Hospital building in ward No: 02 ಕಾಮಗಾರಿಯ ಅಂದಾಜು ಮೊತ್ತ ರೂ. 300.00 ಲಕ್ಷಗಳ ಕಾಮಗಾರಿಯನ್ನು ಯಲಹಂಕ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 2016-17ನೇ ಸಾಲಿನ ಆಯವ್ಯಯದ ಎಸ್.ಎಫ್.ಸಿ. ಅನುದಾನದಲ್ಲಿ ಲೆಕ್ಕ ಶೀರ್ಷಿಕೆ ಪಿ-3111ರಡಿಯಲ್ಲಿ ಜಾಬ್ ಸಂಖ್ಯೆ: 002-17-000020 ನೀಡಲಾಗಿರುತ್ತದೆ.

ವಾರ್ಡ್ ಸಂಖ್ಯೆ: 02ರ ವ್ಯಾಪ್ತಿಯಲ್ಲಿನ ಆಸ್ಪತ್ರೆಯ ಕಟ್ಟಡವು ಶಿಥಿಲಗೊಂಡಿದ್ದು, ರೋಗಿಗಳಿಗೆ ತುಂಬಾ ಅನಾನುಕೂಲವಾಗಿರುವುದರಿಂದ ಸಾರ್ವಜನಿಕರ ಆರೋಗ್ಯ ಮತ್ತು ಸೇವಾ ಹಿತದೃಷ್ಟಿಯಿಂದ ಆಸ್ಪತ್ರೆಯ ನವೀಕರಣ ಮತ್ತು ಇನ್ನಿತರೇ ಅವಶ್ಯಕವಾಗಿರುವ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳುವಂತೆ ವಾರ್ಡ್: 02ರ ಪಾಲಿಕೆ ಸದಸ್ಯರವರು ಕೋರಿರುತ್ತಾರೆ. ಅದರಂತೆ, ಸ್ಥಳೀಯ ವೈದ್ಯಾಧಿಕಾರಿಗಳು ಮತ್ತು ಆಸ್ಪತ್ರೆ ಸಮಿತಿ ಸದಸ್ಯರವರೊಂದಿಗೆ ಹಾಗೂ ಸ್ಥಳೀಯ ಶಾಸಕರೊಂದಿಗೆ ಚರ್ಚಿಸಿ ಅಗತ್ಯವಾಗಿ ಕೈಗೊಳ್ಳಬೇಕಾಗಿರುವ ನವೀಕರಣ ಕಾಮಗಾರಿಗಳನ್ನು ಕೈಗೊಳ್ಳಲು ಅಂದಾಜು ಪಟ್ಟಿಯನ್ನು ರೂ. 300.00 ಲಕ್ಷಗಳಿಗೆ 2016-17ನೇ ಸಾಲಿನ ಲೋಕೋಪಯೋಗಿ ಇಲಾಖೆ ದರಗಳ ಪಟ್ಟಿಯಂತೆ ತಯಾರಿಸಲಾಗಿದೆ.

ಸದರಿ ಕಾಮಗಾರಿಯನ್ನು ಸಾರ್ವಜನಿಕ ಸೇವಾ ಹಿತದೃಷ್ಟಿಯಿಂದ ತುರ್ತಾಗಿ ಕೈಗೊಳ್ಳಬೇಕಾಗಿದ್ದರಿಂದ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಮಂಜೂರಾತಿಯನ್ನು ನಿರೀಕ್ಷಿಸಿ ಕಾರ್ಯಪಾಲಕ ಅಭಿಯಂತರರು, ಯೋಜನೆ-ಯಲಹಂಕ ವಿಭಾಗ ರವರು ದಿನಾಂಕ: 13-04-2017ರಂದು ಟೆಂಡರ್ ಆಹ್ವಾನಿಸಲಾಗಿತ್ತು.

ತಾಂತ್ರಿಕ ಬಿಡ್‌ಅನ್ನು ದಿನಾಂಕ: 16-05-2017ರಂದು ತೆರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿ (1) ಶ್ರೀ.ಕೆ.ಗೋಪಿರೆಡ್ಡಿ (2) ಶ್ರೀ. ಅಬ್ಬು ಸಾಂಬಶೀವಾರೆಡ್ಡಿ (3) ಶ್ರೀ.ಕೆ.ವಿ.ಕೃಷ್ಣಾರೆಡ್ಡಿ (M/s.Ramkrishy Infrastructure Pvt.ltd.,)ರವರು ಭಾಗವಹಿಸಿದ್ದು, ಸದರಿ ಬಿಡ್‌ದಾರರ ಪೈಕಿ **ಶ್ರೀ.ಕೆ.ಗೋಪಿರೆಡ್ಡಿ** ಒಬ್ಬರು ಮಾತ್ರ ತಾಂತ್ರಿಕ ಮೌಲ್ಯಮಾಪನದಲ್ಲಿ ಅರ್ಹತೆ ಹೊಂದಿರುವುದರಿಂದ ಮುಖ್ಯ ಅಭಿಯಂತರರು, ಯಲಹಂಕ ವಲಯ ರವರು ಆರ್ಥಿಕ ಬಿಡ್ ತೆರೆಯಲು ಅನುಮೋದಿಸಿರುವಂತೆ ದಿನಾಂಕ: 10-07-2017ರಂದು ಆರ್ಥಿಕ ಬಿಡ್‌ಅನ್ನು ತೆರೆಯಲಾಗಿದ್ದು, ವಿವರ ಈ ಕೆಳಕಂಡಂತಿವೆ.

ಕ್ರ ಸಂ	ಗುತ್ತಿಗೆದಾರರ ಹೆಸರು	ಟೆಂಡರ್‌ಗಿಟ್ಟ ಮೊತ್ತ (ರೂ. ಗಳಲ್ಲಿ) 2016-17ನೇ ಸಾಲಿನ ದರ ಪಟ್ಟಿಯಂತೆ	2016-17ನೇ ಸಾಇನ ಪರಿಷ್ಕೃತ ದರಗಳಂತೆ	ಗುತ್ತಿಗೆದಾರರು ನಮೂದಿಸಿದ ಮೊತ್ತ (ರೂ.ಗಳಲ್ಲಿ)	ಗುತ್ತಿಗೆದಾರರು ನಮೂದಿಸಿದ ಮೊತ್ತವನ್ನು ಟೆಂಡರ್‌ಗಿಟ್ಟ ಮೊತ್ತ ಹೋಲಿಸಿದಾಗ ಶೇಕಡವಾರು ಪ್ರೀಮಿಯಂ	2016-17ನೇ ಸಾಲಿನ ಪರಿಷ್ಕೃತ ದರಗಳಂತೆ ಶೇಕಡವಾರು ಪ್ರಿಮೀಯಂ
1	ಶ್ರೀ.ಕೆ.ಗೋಪಿರೆಡ್ಡಿ	29645814.00	29775734.00	32886063.00	10.93% ಹೆಚ್ಚು	10.45% ಹೆಚ್ಚು

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ (1) ಕಾಮಗಾರಿಯ ಅಂದಾಜು ಮೊತ್ತ ರೂ. 300.00 ಲಕ್ಷಗಳಿಗೆ ಸ್ಥಾಯಿ ಸಮಿತಿಯಿಂದ ಆಡಳಿತಾತ್ಮಕ ಅನುಮೋದನೆಯನ್ನು ನಿರೀಕ್ಷಿಸಿ ಟೆಂಡರ್ ಆಹ್ವಾನಿಸಲಾಗಿರುವುದರಿಂದ ಘಟನೋತ್ತರ ಆಡಳಿತಾತ್ಮಕ ಅನುಮೋದನೆ (2) ಸದರಿ ಕಾಮಗಾರಿಯನ್ನು ಸಾರ್ವಜನಿಕರ ಸೇವಾ ಹಾಗೂ ಆರೋಗ್ಯ ಹಿತದೃಷ್ಟಿಯಿಂದ ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ ಗುತ್ತಿಗೆದಾರರಾದ **ಶ್ರೀ.ಕೆ.ಗೋಪಿರೆಡ್ಡಿ** ರವರು ನಮೂದಿಸಿರುವ ಬಿಡ್ ಮೊತ್ತವಾದ ರೂ. 32886063.00ಗಳಿಗೆ, ಟೆಂಡರ್ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ದಿನಾಂಕ: 20-07-2017ರ ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ.

ನಿರ್ಣಯ :- ವಿಶೇಷ ಆಯುಕ್ತರು (ಯೋಜನೆ) ರವರ ದಿ: 20-07-2017 ರ ಟಿಪ್ಪಣಿಯಂತೆ ಸಮಿತಿಯು ಒಪ್ಪಿದೆ.

ಅಧ್ಯಕ್ಷರು,
ಸಹಾ. ಸಾ. ಕಾ. ಸ್ಥಾ. ಸ.

ಕ್ರ ಸಂ.	ಹೆಸರು ಮತ್ತು ಪದನಾಮ		ಸಹಾ. ಸಾ. ಕಾ. ಸ್ಥಾ. ಸ.
1	ಡಿ.ಚಂದ್ರಪ್ಪ	ಅಧ್ಯಕ್ಷರು	
2	ಎಲ್.ಗೋವಿಂದರಾಜು	ಸದಸ್ಯರು	
3	ಜಿ.ಕೋಕಿಲಾ ಚಂದ್ರಶೇಖರ್	ಸದಸ್ಯರು	
4	ಟಿ.ರಾಮಚಂದ್ರ	ಸದಸ್ಯರು	
5	ಶೋಭಾ ಗೌಡ	ಸದಸ್ಯರು	
6	ಇಮ್ರಾನ್ ಪಾಷ	ಸದಸ್ಯರು	
7	ಪ್ರತಿಮ.ಆರ್	ಸದಸ್ಯರು	
8	ಭಾಗ್ಯಲಕ್ಷ್ಮಿ ಮುರಳಿ	ಸದಸ್ಯರು	

ಕ್ರ ಸಂ.	ಹೆಸರು ಮತ್ತು ಪದನಾಮ		ಸಹಿ
9	ಅನುಪಮ ಧರ್ಮಪಾಲ್	ಸದಸ್ಯರು	Anupama
10	ಎ.ವಿ.ನಂದಿನಿ ವಿಜಯ ವಿಠಲ್	ಸದಸ್ಯರು	A V Nandini
11	ಶೋಭಾ ಆಂಜನಪ್ಪ	ಸದಸ್ಯರು	

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ

ವಿಷಯ: Construction of Hospital Building in Ward No:02 ಅಂದಾಜು ಮೊತ್ತ ರೂ.300.00 ಲಕ್ಷಗಳ ಕಾಮಗಾರಿಗೆ ಆಡಳಿತಾತ್ಮಕ ಮತ್ತು ಟೆಂಡರ್ ಅನುಮೋದನೆ ನೀಡುವ ಬಗ್ಗೆ.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, Construction of Hospital Building in Ward No:02 ಅಂದಾಜು ಮೊತ್ತ ರೂ.300.00 ಲಕ್ಷಗಳ ಕಾಮಗಾರಿಯನ್ನು ಯಲಹಂಕ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 2016-17ನೇ ಸಾಲಿನ ಆಯವ್ಯಯದ ಎಸ್.ಎಫ್.ಸಿ ಅನುದಾನದಲ್ಲಿ ಲೆಕ್ಕ ಶೀರ್ಷಿಕೆ ಪಿ3111 ರಡಿಯಲ್ಲಿ ಜಾಬ್ ಸಂಖ್ಯೆ:002-17-000020 ನೀಡಲಾಗಿರುತ್ತದೆ.

ವಾರ್ಡ್ ನಂ:02ರ ವ್ಯಾಪ್ತಿಯಲ್ಲಿನ ಆಸ್ಪತ್ರೆಯ ಕಟ್ಟಡವು ಶಿಥಿಲಗೊಂಡಿದ್ದು, ರೋಗಿಗಳಿಗೆ ತುಂಬಾ ಅನಾನುಕೂಲವಾಗಿರುವುದರಿಂದ ಸಾರ್ವಜನಿಕರ ಆರೋಗ್ಯ ಮತ್ತು ಸೇವಾ ಹಿತದೃಷ್ಟಿಯಿಂದ ಆಸ್ಪತ್ರೆಯ ನವೀಕರಣ ಮತ್ತು ಇನ್ನಿತರೆ ಅವಶ್ಯಕವಾಗಿರುವ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳುವಂತೆ ವಾರ್ಡ್ ನಂ:02ರ ಪಾಲಿಕೆ ಸದಸ್ಯರವರು ಕೋರಿರುತ್ತಾರೆ. ಅದರಂತೆ, ಸ್ಥಳೀಯ ವೈದ್ಯಾಧಿಕಾರಿಗಳು ಮತ್ತು ಆಸ್ಪತ್ರೆ ಸಮಿತಿ ಸದಸ್ಯರವರೊಂದಿಗೆ ಹಾಗೂ ಸ್ಥಳೀಯ ಶಾಸಕರೊಂದಿಗೆ ಚರ್ಚಿಸಿ ಅಗತ್ಯವಾಗಿ ಕೈಗೊಳ್ಳಬೇಕಾಗಿರುವ/ನವೀಕರಣ ಕಾಮಗಾರಿಗಳನ್ನು ಕೈಗೊಳ್ಳಲು ಅಂದಾಜು ಪಟ್ಟಿಯನ್ನು ರೂ.300.00 ಲಕ್ಷಗಳಿಗೆ 2016-17ನೇ ಸಾಲಿನ ಲೋಕೋಪಯೋಗಿ ಇಲಾಖೆ ದರಗಳ ಪಟ್ಟಿಯಂತೆ ತಯಾರಿಸಲಾಗಿದೆ.

ಸದರಿ ಕಾಮಗಾರಿಯನ್ನು ಸಾರ್ವಜನಿಕ ಸೇವಾ ಹಿತದೃಷ್ಟಿಯಿಂದ ತುರ್ತಾಗಿ ಕೈಗೊಳ್ಳಬೇಕಾಗಿದ್ದರಿಂದ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಮಂಜೂರಾತಿಯನ್ನು ನಿರೀಕ್ಷಿಸಿ ಕಾರ್ಯಪಾಲಕ ಅಭಿಯಂತರರು, ಯೋಜನೆ – ಯಲಹಂಕ ವಿಭಾಗ ರವರು ದಿನಾಂಕ: 13-04-2017 ರಂದು ಟೆಂಡರ್ ಆಹ್ವಾನಿಸಲಾಗಿತ್ತು.

ತಾಂತ್ರಿಕ ಬಿಡ್‌ಅನ್ನು ದಿನಾಂಕ:16-05-2017 ರಂದು ತೆರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿ 1) ಶ್ರೀ.ಕೆ.ಗೋಪಿರೆಡ್ಡಿ, 2) ಶ್ರೀ.ಅಬ್ಬುಸಾಂಬಶಿವಾರೆಡ್ಡಿ ಮತ್ತು 3) ಶ್ರೀ.ಕೆ.ವಿ.ಕೃಷ್ಣಾರೆಡ್ಡಿ(M/s Ramkrishy Infrastructure Pvt Ltd.,) ರವರು ಭಾಗವಹಿಸಿದ್ದು, ಸದರಿ ಬಿಡ್‌ದಾರರ ಪೈಕಿ ಶ್ರೀ.ಅಬ್ಬುಸಾಂಬಶಿವಾರೆಡ್ಡಿ ಮತ್ತು ಶ್ರೀ.ಕೆ.ವಿ.ಕೃಷ್ಣಾರೆಡ್ಡಿ(M/s Ramkrishy Infrastructure Pvt Ltd.,) ರವರು ತಾಂತ್ರಿಕ ಮೌಲ್ಯಮಾಪನದಲ್ಲಿ ಅನರ್ಹತೆ ಹೊಂದಿರುವುದರಿಂದ ಬಿಡ್‌ದಾರರಾದ ಶ್ರೀ.ಕೆ.ಗೋಪಿರೆಡ್ಡಿ ರವರು ತಾಂತ್ರಿಕವಾಗಿ ಅರ್ಹತೆ ಹೊಂದಿದ್ದು, ಮುಖ್ಯ ಅಭಿಯಂತರರು, ಯಲಹಂಕ ವಲಯ ರವರು ಆರ್ಥಿಕ ಬಿಡ್ ತೆರೆಯಲು ಅನುಮೋದಿಸಿರುವಂತೆ ದಿನಾಂಕ:10-07-2017ರಂದು ಆರ್ಥಿಕ ಬಿಡ್‌ಅನ್ನು ತೆರೆಯಲಾಗಿರುತ್ತದೆ. ವಿವರ ಕೆಳಕಂಡಂತೆ ಇರುತ್ತದೆ.

ಕ್ರ. ಸಂ	ಗುತ್ತಿಗೆದಾರರ ಹೆಸರು	ಟೆಂಡರ್‌ಗಿಟ್ಟ ಮೊತ್ತ (ರೂ.ಗಳಲ್ಲಿ) 2016-17ನೇ ಸಾಲಿನ ದರ ಪಟ್ಟಿಯಂತೆ	2016-17ನೇ ಸಾಲಿನ ಪರಿಷ್ಕೃತ ದರಗಳಂತೆ	ಗುತ್ತಿಗೆದಾರರು ನಮೂದಿಸಿದ ಮೊತ್ತ (ರೂ.ಗಳಲ್ಲಿ)	ಗುತ್ತಿಗೆದಾರರು ನಮೂದಿಸಿದ ಮೊತ್ತವನ್ನು ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡವಾರು ಪ್ರಿಮಿಯಂ	2016-17ನೇ ಸಾಲಿನ ಪರಿಷ್ಕೃತ ದರಗಳಂತೆ ಶೇಕಡವಾರು ಪ್ರಿಮಿಯಂ	ಷರಾ
1	Sri.K.Gopi reddy	29645814.00	29775734.00	32886063.00	10.93% ಹೆಚ್ಚು	10.45% ಹೆಚ್ಚು	ಎಲ್-1

ಈ ಕೆಳಕಂಡ ಅಂಶಗಳಿಗೆ ಅನುಮೋದನೆ ನೀಡಲು ಮಂಡಿಸಲಾದ ಟಿಪ್ಪಣಿ.

1. ಕಾಮಗಾರಿಯ ಅಂದಾಜು ಮೊತ್ತ ರೂ.300.00 ಲಕ್ಷಗಳಿಗೆ ಬೃಹತ್ ಕಾಮಗಾರಿ ಸ್ಥಾಯಿ ಸಮಿತಿಯಿಂದ ಆಡಳಿತಾತ್ಮಕ ಅನುಮೋದನೆಯನ್ನು ನಿರೀಕ್ಷಿಸಿ ಟೆಂಡರ್ ಆಹ್ವಾನಿಸಲಾಗಿರುವುದರಿಂದ, ಘಟನೋತ್ತರ ಆಡಳಿತಾತ್ಮಕ ಅನುಮೋದನೆ.
2. ಸದರಿ ಕಾಮಗಾರಿಯನ್ನು ಸಾರ್ವಜನಿಕರ ಸೇವಾ ಹಾಗೂ ಆರೋಗ್ಯ ಹಿತದೃಷ್ಟಿಯಿಂದ ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ ಗುತ್ತಿಗೆದಾರರಾದ **Sri.K.Gopireddy** ರವರು ನಮೂದಿಸಿರುವ ಬಿಡ್ ಮೊತ್ತವಾದ ರೂ. 32886063.00/- ಗಳಿಗೆ, ಟೆಂಡರ್ ಅನುಮೋದನೆ ನೀಡಲು ಬೃಹತ್ ಕಾಮಗಾರಿ ಸ್ಥಾಯಿ ಸಮಿತಿ ಮುಖಾಂತರ ಕೌನ್ಸಿಲ್ ಅನುಮೋದನೆಗಾಗಿ.

ವಿಶೇಷ ಆಯುಕ್ತರು (ಯೋಜನೆ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

13/7